# ಅಂಗೈಯಲ್ಲಿ ಜಿಂಕೆ



ಕಾಗದದಲ್ಲಿ ಕಲೆ ಅರಳಿಸುವ ಶೈಲಿ ಮನಮೋಹಕ. ಬಳ್ಳಾರಿಯ ಸಿರಿಗುಪ್ಪದಲ್ಲಿ ಭಾಷಾ ಶಿಕ್ಷಕರಾಗಿರುವ ಅರುಣ್ ಕುಮಾರ್ ಇವರು ತಮ್ಮ ವಿಭಿನ್ನ ಪೇಪರ್ ಕಲೆಯ ಮೂಲಕ ಎಲ್ಲರ ಗಮನ ಸೆಳೆದಿದ್ದಾರೆ. ಇದು ಪೇಪರ್‌ನಲ್ಲಿ ಮಾಡಿದ್ದಾ? ಎಂದು ನೋಡುಗರು ಹುಬ್ಬೇರಿಸುವಂತೆ ಮಾಡಿದ್ದಾರೆ.

ಇವರು ಶಾಲೆಯಲ್ಲಿ ಆರಂಭದಲ್ಲಿ ಪೇಪರ್ ದೋಣಿ, ಸಣ್ಣ ಸಣ್ಣ ಆಕೃತಿ ಮಾಡುತ್ತಿದ್ದರು. ತದನಂತರ ಪ್ರಾಣಿ, ಪಕ್ಷಿ. ಕಟ್ಟಡಗಳನ್ನು ಮಾಡತೊಡಗಿದರು. ಸೂಕ್ಷ್ಮ ಕಲೆಯ ಈ ಪೇಪರ್ ಕಲೆಯು ನೋಡಲು ಅತ್ಯಾಕರ್ಷಕವಾಗಿದ್ದು, ಕೆಲ ಕಲಾಕೃತಿಗಳನ್ನು ರಚಿಸಲು ಸಾಕಷ್ಟು ಸಮಯ ತೆಗೆದುಕೊಳ್ಳುತ್ತವೆಯಂತೆ. ಚಿತ್ರದಲ್ಲಿ ಕಾಣುತ್ತಿರುವ ಜಿಂಕೆಯು ಪೇಪರ್‌ನಿಂದ ಮಾಡಿದ್ದು, ಅನೇಕರನ್ನು ತನ್ನತ್ತ ಆಕರ್ಷಿಸಿದೆ.

**-ಈರಣ್ಣ ಬೆಂಗಾಲಿ, ರಾಯಚೂರು**

# ಹೆಸರು ಪವಿತ್ರ ಗಿರಣಿಯೂ ಪವಿತ್ರ



ನರಸಿಂಹರಾಜಪುರ ಗುಬ್ಬಿಗೆರೆ ಹತ್ತಿರ ಇರುವ ಪವಿತ್ರ ಹಿಟ್ಟಿನ ಗಿರಣಿ ವಿಶೇಷತೆಯಿಂದ ಕೂಡಿದೆ. ಒಂದೊಂದು ಧಾನ್ಯಕ್ಕೂ ಒಂದೊಂದು ಗಿರಣಿ ಮಾಡಲಾಗಿದೆ. ಗೋಧಿ ಒಂದರಲ್ಲಿ, ಮೆಣಸು ಮತ್ತು ದನಿಯಾ ಒಂದರಲ್ಲಿ, ಅಕ್ಕಿ ಒಂದರಲ್ಲಿ, ರಾಗಿ ಒಂದರಲ್ಲಿ, ರವೆ ಒಂದರಲ್ಲಿ ಹಾಕಲಾಗುತ್ತದೆ. ಹೀಗಾಗಿ ಅಕ್ಕಿಹಿಟ್ಟು, ಗೋಧಿಹಿಟ್ಟು, ರಾಗಿಹಿಟ್ಟು, ಮೆಣಸು ದನಿಯಪುಡಿ ಮತ್ತು ರವೆ ಶುದ್ಧವಾಗಿ, ತಾಜಾ ಆಗಿ ಹೊರಬರುತ್ತದೆ. ಅಕ್ಕಿಹಿಟ್ಟಿನ ಮೇಲೆ ಗೋಧಿ ಹಿಟ್ಟು ಇರುವುದಿಲ್ಲ.

**-ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ**



# ಮನೆ ಕಟ್ಟುವ ಹರಕೆ!

ಧಾರವಾಡ ಜಿಲ್ಲೆಯ ಬೂದನ ಗುಡ್ಡದ ಬಸವೇಶ್ವರ ದೇವಾಲಯಕ್ಕೆ ಬರುವ ಭಕ್ತರಲ್ಲಿ ವಿಶಿಷ್ಟವಾದ ನಂಬಿಕೆಯೊಂದು ಬೆಳೆದು ಬಂದಿದೆ. ತಮ್ಮ ಸ್ವಂತ ಮನೆ ಕಟ್ಟಿಸುವ ಬೇಡಿಕೆ ಈಡೇರಲೆಂದು ಗುಡ್ಡದ ಮೇಲೆ ಕಲ್ಲುಗಳಿಂದ ಚಿಕ್ಕ ಮನೆ ಕಟ್ಟುತ್ತಾರೆ. ಅವರ ಬಯಕೆ ಶೀಘ್ರದಲ್ಲೇ ಈಡೇರುತ್ತದೆ ಎಂಬುದು ನಂಬಿಕೆ. ಅನಂತರ ಹರಕೆ ಈಡೇರಿದ ಮೇಲೆ ಮರಳಿ ಬಂದು ಕಲ್ಲಿನ ಮನೆಯನ್ನು ಕೆಡವಿ ಹೋಗುತ್ತಾರೆ.

**-ಪ್ರಕಾಶ. ಎಸ್. ಮನ್ನಂಗಿ**